ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	26 (315)
ಉತ್ತರಿಸಬೇಕಾದ ದಿನಾಂಕ	14.09.2021
ಉತ್ತರಿಸುವವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ನಗರದಲ್ಲಿ KUWS ನಿಂದ ಎಷ್ಟು ಕಿ.ಮೀ ಯುಜಿಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ; ಸದರಿ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ; ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದೆ; ಸದರಿ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು; (ವಿವರ ನೀಡುವುದು)	ಬೀದರ್ ನಗರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWS & DB) ನಿಂದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ವಲಯ-2, ವಲಯ-3 ಮತ್ತು ವಲಯ-1 & 2 ರ ಬಿಟ್ಟು ಹೋದ ಪ್ರದೇಶಗಳಲ್ಲಿ ಒಳಚರಂಡಿ (ಯುಜಿಡಿ) ಕಾಮಗಾರಿಯನ್ನು ಕೈಕೊಳ್ಳಲಾಗಿದೆ. 1) ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಬೀದರ್ ನಗರದ ವಲಯ-2 ಕ್ಕೆ ಒಳಚರಂಡಿ ಯೋಜನೆ:- ಸದರಿ ಯೋಜನೆಯಡಿ 133.00 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗ ಅಳಡಿಸಲಾಗಿದೆ. ಸದರಿ ಕಾಮಗಾರಿಯು ನವೆಂಬರ್-2016 ರಲ್ಲಿ ಪ್ರಾರಂಭಗೊಂಡಿದ್ದು, ಡಿಸೆಂಬರ್-2019 ರಲ್ಲಿ ಪೂರ್ಣಗೊಳಿಸಲಾಗಿದೆ. ಸದರಿ ಕಾಮಗಾರಿಯನ್ನು ಮೆ|| ಎಲ್.ಸಿ. ಇನ್ಫ್ರಾ ಪ್ರೊಜೆಕ್ಟ್ಸ್ ಪ್ರೈ.ಲಿ. ಅಹಮದಾಬಾದ, ಈ ಗುತ್ತಿಗೆದಾರರು ನಿರ್ವಹಿಸಿರುತ್ತಾರೆ. 2) ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಬೀದರ್ ನಗರದ ವಲಯ-3 ಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನದಡಿ):- ಸದರಿ ಯೋಜನೆಯಡಿ 63.50 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗ ಅಳಡಿಸಲಾಗಿದೆ. ಸದರಿ ಕಾಮಗಾರಿಯು ಅಕ್ಟೋಬರ್-2018 ರಲ್ಲಿ ಪ್ರಾರಂಭಗೊಂಡಿದ್ದು, ಏಪ್ರಿಲ್-2020 ರಲ್ಲಿ ಪೂರ್ಣಗೊಳಿಸಬೇಕಿತ್ತು. ಆದರೆ, ಮಲೀನ ನೀರು ಸಂಸ್ಕರಣಾ ಘಟಕ ನಿರ್ಮಿಸಲು ಸ್ಥಳವನ್ನು ಸ್ಥಳೀಯ ಸಂಸ್ಥೆ ವತಿಯಿಂದ ದಿನಾಂಕ 02.02.2021 ರಲ್ಲಿ ಕ.ನ.ನೀ.ಸ & ಒ.ಚ ಮಂಡಳಿಗೆ ಹಸ್ತಾಂತರಿಸಲಾಗಿದೆ. ಆದ್ದರಿಂದ, ಈ ಕಾಮಗಾರಿಯನ್ನು ಮಾರ್ಚ 2022 ರಲ್ಲಿ ಪೂರ್ಣಗೊಳಿಸಲು ಉದೇಶಿಸಲಾಗಿದೆ. ಸದರಿ ಕಾಮಗಾರಿಯನ್ನು ಮೆ|| ಜಯಂತಿ ಸುಪರ ಕನ್ಸ್ಟ್ರಕ್ಷನ್ ಪ್ರೈ.ಲಿ. ಮೆಹಸಾನಾ, ಗುಜರಾತ, ಈ ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ.

ಆ)	ಯುಜಿಡಿ ಕಾಮಗಾರಿ ಮಾಡುವ ಸಂಧರ್ಭದಲ್ಲಿ, ಒಳ್ಳೆಯ ರಸ್ತೆಗಳನ್ನು ಅಗೆದು ಹಾಳು ಮಾಡಿ ಅದನ್ನು ಸರಿಯಾದ ರೀತಿಯಲ್ಲಿ ರಸ್ತೆ ನಿರ್ಮಾಣ ಕಾರ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಒಳಚರಂಡಿ (ಯುಜಿಡಿ) ಕಾಮಗಾರಿ ಮಾಡುವ ಸಂದರ್ಭದಲ್ಲಿ ರಸ್ತೆಗಳನ್ನು ಅಗೆದಾಗ ಅದನ್ನು ಹಾಲಿ ರಸ್ತೆಗಳಿಗೆ ಹೋಲುವಂತೆಯೇ ಮರುನಿರ್ಮಾಣ ಮಾಡಲಾಗಿದೆ.
ಇ)	ಮೊದಲ ಹಂತದಲ್ಲಿ KUIDFC ವತಿಯಿಂದ ಎಷ್ಟು ಕಿ.ಮೀ ಯು.ಜಿ.ಡಿ ಮಾಡಲಾಗಿದೆ; ಬಹಳಷ್ಟು ಕಾಮಗಾರಿ ಬಿಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮೊದಲ ಹಂತದಲ್ಲಿ KUIDFC ವತಿಯಿಂದ ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (NKUSIP) ಅನುಮೋದಿತ ಅನುದಾನದ ಅನುಗುಣವಾಗಿ ಬೀದರ್ ನಗರದಲ್ಲಿ ಒಳಚರಂಡಿ ಯೋಜನೆಯಲ್ಲಿ (2 ಪ್ಯಾಕೇಜು) ಕೊಳವೆ ಜಾಲ 82.85 ಕಿ.ಮೀ ಉದ್ದ, 2702 ಮ್ಯಾನ್ ಹೋಲ್ ಮತ್ತು 3905 ಜಲತ್ಯಾಜ್ಯ ಪಡೆಯುವ ಚೆಂಬರ್ (Receiving chamber) ಅಳವಡಿಸಲಾಗಿದೆ. ಸದರಿ ಗುತ್ತಿಗೆ ಕರಾರಿನ ಅವಕಾಶದಂತೆ, ವಿಸ್ತೃತ ವರದಿಯಲ್ಲಿ ರೂಪಿಸಿದ್ದಷ್ಟು ಉದ್ದದ ಒಳಚರಂಡಿ ಜಾಲವನ್ನು ಸಂಪೂರ್ಣಗೊಳಿಸಲಾಗಿದೆ. ಕೆಲವು ಬಡಾವಣೆಗಳಲ್ಲಿ ಬಿಟ್ಟು ಹೋಗಿರುವ ಕಾಮಗಾರಿಗಳನ್ನು ಅಮೃತ್ ಯೋಜನೆಯಡಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ.
ಈ)	ಈ ರೀತಿ ಕಾಮಗಾರಿ ಬಿಟ್ಟಿರುವ ಗುತ್ತಿಗೆದಾರರ ಹಾಗೂ KUIDFC ಯ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?	ಗುತ್ತಿಗೆ ಕರಾರಿನಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಒಳಚರಂಡಿ ಜಾಲದ ಕಾಮಗಾರಿಯನ್ನು ಸಂಪೂರ್ಣ ಗೊಳಿಸಿರುವುದರಿಂದ, ಗುತ್ತಿಗೆದಾರರು ಹಾಗೂ ಕೆ.ಯು.ಐ.ಡಿ.ಎಫ್.ಸಿ ವಿರುದ್ಧ ಕ್ರಮಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.

ಸಂಖ್ಯೆ: ನಅಇ 118 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು